ದಿಃ **24-01-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಃ ಶ್ರೀ ಐಎಂಪಿ. ವಕೀಲರಿಂದಃ**

ದಾವ ಆಸ್ತಿಗಳು ಟಿಬಿಪಿ ಕೆನಾಲ್ ಮೂಲಕ ಟೇಲ್ ಎಂಡ್( ಕೊನೆಯ ಹಂತದ) ನಿರಾವರಿ ಜಮೀನುಗಳು ಎಂದರೆ ಸರಿಯಲ್ಲ. ಕೆಲವು ಜಮೀನುಗಳು ಮಳೆ ಆದಾರಿತ ಜಮಿನುಗಳು ಎಂದರೆ ಸರಿಯಲ್ಲ. ತುಂಗಾಬದ್ರ ಕಾಲುವೆಯ ನೀರು ಮಾನವಿಯವರೆಗೆ ಮಾತ್ರ ಬರುತ್ತದೆ. ಸದರಿ ಕಾಲುವೆಯ ನೀರು ಕಲ್ಲೂರು ಜಮಿನುಗಳಿಗೆ ಮುಟ್ಟುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಜಮೀನಿನಿಂದ ಬರುವ ಆದಾಯ ಅವರ ಕುಟುಂಬ ನಿರ್ವಾಹಣೆ ಮಾಡುವ ಮಾತ್ರ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಒಕ್ಕಲುತನದಿಂದ ತಮ್ಮ ಖರ್ಚು ವೆಚ್ಚ ಹೋಗಿ ಹೆಚ್ಚಿನ ಆದಾಯ ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸಾಕಷ್ಟು ಆದಾಯ ಬರುತ್ತದೆ ಎಂದು ನುಡಿಯುತ್ತಾರೆ.

2. ನನ್ನ ಜಮೀನು ಹೊಸ ಕೃಷ್ಣ ಕಾಲುವೆಯ ಮೂಲಕ ನಿರಾವರಿ ಸೌಲಭ್ಯ ಇರುವ ಜಮೀನು ಎಂದರೆ ನಿಜ.

3. ಪ್ರತಿವಾದಿಯರು ದಾವ ಜಮಿನುಗಳಿಂದ ಬಂದ ಆದಾಯ ನಿಂದ ನಂದಿ ಕಾಂಪ್ಲೆಕ್ಸ್, ನಂದಿ ನಿಲಯ ಮತ್ತು ನಂದಿ ಫಾರ್ಮ್, ಹೆಚ್ ಆರ್ ಬಿ ಲೆಔಟ್ ನಲಿಯ ಪ್ಲಾಟ್ಸ್ ಇವುಗಳನ್ನು ಗಳಿಸಿರುವುದಾಗಿ ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಟ್ರಾಕ್ಟರ್ ಮತು ಭತ್ತದ ರಾಶಿ ಯಂತ್ರ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನಗಳ ಆರ್ ಸಿ ಬುಕ್ ಸಿಗುತವೆ ಎಂದರೆ ನಿಜ. ಸದರಿ ದಾಖಲೆಗಳನ್ನು ಪಡೆದುಕೊಂಡು ಈ ದಾವೆಯಲ್ಲಿ ಹಾಜರುಪಡಿಸಲು ಪ್ರಯತ್ನಿಸಿರುವುದಿಲ್ಲ. ಅಶೋಕ ಕಾಲೋನಿಯ ನಿವೇಶನ ನಂ. 30 ಇದನ್ನು 1ನೇ ಪ್ರತಿವಾದಿ ತನ್ನ ಸ್ವಂತ ಆದಾಯದಿಂದ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ನನ್ನ ಮಾವ 1ನೆ ಪ್ರತಿವಾದಿ ಲಾರಿ ಟ್ರಾನ್ಸ ಪೊರ್ಟ್ ಬಿಸಿನೆಸ್ ಮಾಡುತ್ತಿದ್ದರು ಎಂದರೆ ಸರಿಯಲ್ಲ.

4. 5ನೇ ಪ್ರತಿವಾದಿ ನನ್ನ ತಾಯಿಯಾಗಿರುತ್ತಾರೆ. 6ನೇ ಪ್ರತಿವಾದಿ ನನ್ನ ಚಿಕ್ಕಮ್ಮ ಆಗಿರುತಾರೆ. ಸರ್ವೇ ನಂ.154, 153, 190 ಮತ್ತು 191 ಆಸ್ತಿಗಳು 5 ಮತು 6ನೇ ಪ್ರತಿವಾದಿಯರಿಗೆ ಬಸ್ಸಪ್ಪ ಇವರು ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸೀಲಿಂಗ್

ಕಾಯಿದೆ ನಡಿ ಜಮಿನು ಉಳಿಸಿಕೊಳ್ಳಲು ಅವರ ಹೆಸರಿಗೆ ದಾಖಲಿಸಿದ್ದರು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು 5 ಮತ್ತು 6 ನೇ ಪ್ರತಿವಾದಿಯರ ಸ್ರೀಧನ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಆಸ್ತಿಗಳನು ಸೀಲಿಂಗ ಕಾಯಿದೆಯಡಿ ಉಳಿಸಿಕೊಳಲು 5 ಮತ್ತು 6 ನೇ ಪ್ರತಿವಾದಿಯರಿಗೆ ನೀಡಲಾಗಿತು ಎಂದು ತೋರಿಸಲು ದಾಖಲೆಗಳು ಹಾಜರುಪಡಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲಿ ಸದರಿ ಕಾಣಿಸಿಲ್ಲ ಎಂದರೆ ಸರಿಯಲ್ಲ. 5 ಮತ್ತು 6 ನೇ ಪ್ರತಿವಾದಿಯರು ಸದರಿ ಜಮೀನುಗಳನು ಪ್ರೀತಿಯಿಂದ ದಾನ ಪತ್ರಗಳ ಮೂಲಕ ಪ್ರತಿವಾದಿ 2 ಮತು 3 ರವರಿಗೆ ಬರೆದು ನೀಡಿರುತ್ತಾರೆ ಎಂದರೆ ಸರಿಯಲ್ಲ.

5. ವಾದಿ ದಾವ ಆಸ್ತಿಯಲಿ ಪಾಲು ಕೇಳಿದಾಗ ಅವಳಿಗೆ 1 ರಿಂದ 3 ನೇ ಪ್ರತಿವಾದಿಯರು ಹೆದರಿಸಿರುವುದಾಗಿ ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. 5 ಮತ್ತು 6 ನೇ ಪ್ರತಿವಾದಿ ದಾನ ಪತ್ರ ಬರೆದುಕೊಟ್ಟ ವಿಷಯ ನನಗೆ ಅವರು ದಾನ ಪತ್ರ ಬರೆದು ನೀಡುವಾಗಲೇ ತಿಳಿಸಿದರು ಎಂದರೆ ಸರಿಯಲ್ಲ. ಪ್ರತಿವಾದಿ 5 ಮತ್ತು 6 ರವರು ದಾನ ಪತ್ರ ಮಾಡಿಕೊಟ್ಟಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲಿ 5 ಮತ್ತು 6 ನೇ ದಾನ ಪತ್ರ ಮಾಡಿದ ಬಗೆ ಬರೆಸಿರುತೇನೆ ಎಂದರೆ ನಿಜ. ಸದರಿ 2 ದಾನ ಪತ್ರಗಳು ನೆಪ ಮಾತ್ರಕೆ ತಯಾರಿಸಿದ ದಾಖಲೆಗಳು ಎಂದು ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳು ಸತ್ಯವಾಗಿ ಬರೆದುಕೊಟ್ಟ ದಾಖಲೆಗಳು ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಯರು ಸ್ವಂತಹ ದುಡಿದು ಗಳಿಸಿದ ಕೆಲವು ಆಸ್ತಿಗಳನು ಸೇರಿಸಿ ಸುಳು ದಾವೆ ದಾಖಲಿಸಿರುತೇನೆ ಎಂದರೆ ಸರಿಯಲ್ಲ. ಸುಳು ದಾಖಲೆಗಳನ್ನು ಸಲ್ಲಿಸಿ ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

ಓದಿ ಹೇಳಿ ಸಹಿಪಡೆಯಲಾಗಿದೆ

3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಯಚೂರು.